ಸಂಪಾದಕೀಯ

# ಶ್ರೀರಾಮಕೃಷ್ಣರು ಮತ್ತು ಮಾತೃ ಆರಾಧನೆ



ದೇವರನ್ನು ಮಾತೆಯೆಂದು ಭಾವಿಸಿ, ಪೂಜಿಸುವ ಸಂಪ್ರದಾಯ ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಐತಿಹಾಸಿಕ ದಾಖಲೆಗಳು ಲಭಿಸದಷ್ಟು ಹಿಂದೆ ಕೂಡ ಈ ಬಗೆಯ ಆರಾಧನೆ ರೂಢಿಯಲ್ಲಿದ್ದಿರಬೇಕು. ಏಕೆಂದರೆ, ಇದ್ದಕ್ಕಿದ್ದಂತೆ ಇತಿಹಾಸದಲ್ಲಿ ಒಂದು ಪರಂಪರೆ ಗೋಚರವಾಗದು; ಲಭ್ಯವಿರುವ ದಾಖಲೆಗಳು ಅದಕ್ಕೆ ಹಿಂದಿನ ಪರಂಪರೆ, ಸಂಪ್ರದಾಯಗಳ ಅಸ್ತಿತ್ವವನ್ನು ಸೂಚಿಸುತ್ತವೆ. ಜಗತ್ತಿನ ಅತ್ಯಂತ ಪ್ರಾಚೀನ ಸಾಹಿತ್ಯವೆಂದೇ ಪ್ರಸಿದ್ಧವಾದ ಋಗ್ವೇದದಲ್ಲಿ ಮಾತೃ ಆರಾಧನೆಯ ಹಲವು ಅಂಶಗಳು ಗೋಚರಿಸುತ್ತವೆ. ದೇವೀಸೂಕ್ತ, ದುರ್ಗಾಸೂಕ್ತ, ರಾತ್ರೀಸೂಕ್ತ, ಸರಸ್ವತೀಸೂಕ್ತ — ಈ ಮಂತ್ರಗಳೆಲ್ಲ ಸ್ತ್ರೀಯನ್ನು ದೈವತ್ವದ ನೆಲೆಗೆ ಏರಿಸಿ, ಆರಾಧಿಸುವ ರಚನೆಗಳಾಗಿ ಕಂಡುಬರುತ್ತವೆ. 'ದೇವೀಸೂಕ್ತ'ವನ್ನು ರಚಿಸಿದ ವಾಕ್ ಅಥವಾ ಅಂಭೃಣಿಯು ತನ್ನನ್ನು ತಾನು ದೇವ-ದೇವತೆಗಳೊಂದಿಗೆ ಸಮಾನಳಾಗಿ ಗುರುತಿಸಿಕೊಂಡು, ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ತಾನು ಮಾಡುವುದಾಗಿ ಹೇಳುತ್ತಾಳೆ. ಆತ್ಮಸಾಕ್ಷಾತ್ಕಾರದೊಂದಿಗೆ ದಿವ್ಯಭಾವವನ್ನು ಹೊಂದಿದ ಶ್ರೇಷ್ಠ ಸಾಧಕಿಯೊಬ್ಬಳು ಇಹಲೋಕದ ನೆಲೆಯನ್ನು ದಾಟಿ, ದೇವದೇವತೆಗಳ ನೆಲೆಯಲ್ಲಿ ನಿಂತು, ಜಗತ್ತಿನ ತಾಯಿ ತಾನೆಂಬ ಮಾತೃದೇವತೆಯ ಭಾವವನ್ನು ಧರಿಸಿದಂತೆ, ಜಗತ್ತನ್ನು ಪೊರೆಯುವ ಶಕ್ತಿದೇವತೆಯೇ ತಾನು ಎಂದು ಹೇಳಿದಂತೆ ಅಲ್ಲಿ ಕಂಡುಬರುತ್ತದೆ. ಇನ್ನು ಕೇನೋಪನಿಷತ್ತಿನ ಹೈಮವತೀ ಅಥವಾ ಉಮಾ, ಕಠೋಪನಿಷತ್ತಿನ ದೇವತಾಮಯಿಯಾದ ಅದಿತಿ — ಇವು ಮಾತೃ ಆರಾಧನೆಯು ತಾತ್ತ್ವಿಕ ನೆಲೆಗಟ್ಟನ್ನು ಕಂಡುಕೊಂಡ ಸುಳಿವನ್ನು ನೀಡುತ್ತದೆ. ರಾಮಾಯಣ, ಮಹಾಭಾರತಗಳೂ, ಪುರಾಣ ಗ್ರಂಥಗಳೂ ಮಾತೃ ಆರಾಧನೆಯ ಸಂಪ್ರದಾಯ ಭಾರತೀಯ ಸಂಸ್ಕೃತಿಯಲ್ಲಿ ಭದ್ರವಾಗಿ ನೆಲೆಗೊಂಡದ್ದನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತವೆ. ದೇವೀಮಾಹಾತ್ಮ್ಯ, ದೇವೀಭಾಗವತ ಹಾಗೂ ಇನ್ನಿತರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ತಂತ್ರ, ಶ್ರೀವಿದ್ಯಾ ಮುಂತಾದ ಸಾಧನ ಮಾರ್ಗಗಳು ಬೆಳೆದು ಬಂದವು. ಇವು ತಾತ್ತ್ವಿಕವಾಗಿಯೂ ಪೌರಾಣಿಕ ಕಥಾನಕಗಳಾಗಿಯೂ ಅನುಷ್ಠಾನ ಮಾರ್ಗಗಳಾಗಿಯೂ ದೇವೀ ಆರಾಧನೆಯ ಪರಂಪರೆಯನ್ನು ನಮ್ಮ ದೇಶದಲ್ಲಿ ಬಲಪಡಿಸಿದವು.

### ಶ್ರೀರಾಮಕೃಷ್ಣರ ಸಾಧನೆ ಹಾಗೂ ಮಾತೃ ಆರಾಧನೆ

ಭಾರತವು ಆಂಗ್ಲರ ಆಡಳಿತದಿಂದಾಗಿ ಎಲ್ಲ ಕ್ಷೇತ್ರಗಳಲ್ಲೂ ಪರಿವರ್ತನೆ ಹೊಂದುತ್ತಿದ್ದ ಕಾಲಘಟ್ಟದಲ್ಲಿ ಸಾಂಪ್ರದಾಯಿಕ ನಂಬಿಕೆ, ಧರ್ಮ, ಸಂಪ್ರದಾಯಗಳು ತಿರಸ್ಕಾರಕ್ಕೆ ತುತ್ತಾಗಿದ್ದವು. ಆಧುನಿಕ ವಿದ್ಯಾಭ್ಯಾಸ, ವೈಜ್ಞಾನಿಕ ವಿಚಾರಧಾರೆಗಳು ಪ್ರಾಚೀನ ಧಾರ್ಮಿಕ ಭಾವನೆಗಳೆಲ್ಲ ಅರ್ಥಹೀನವೆಂದು ಎಲ್ಲೆಡೆ ಪ್ರಚಾರ ಮಾಡತೊಡಗಿದವು. ಸನಾತನ ಸಂಸ್ಕೃತಿಯ ಬೇರುಗಳೆಲ್ಲ ತತ್ತರಿಸಿ ಹೋಗುವ ಸ್ಥಿತಿಯಲ್ಲಿದ್ದಾಗ ಭಾರತದ ಪೂರ್ವಭಾಗದಲ್ಲಿ ಮೂಡಿಬಂದ ಆಧ್ಯಾತ್ಮಿಕ ಸೂರ್ಯನೇ ಶ್ರೀರಾಮಕೃಷ್ಣ ಪರಮಹಂಸರು.

ಶ್ರೀರಾಮಕೃಷ್ಣರ ಭಾವನೆ, ಸಾಧನೆ, ಚಿಂತನೆಗಳೆಲ್ಲವೂ ತಮ್ಮ ಗಾಢವಾದ ಆಧ್ಯಾತ್ಮಿಕ ಅನುಭವದಿಂದ ಮೂಡಿಬಂದವುಗಳು. ಅನ್ಯರಿಂದಲೋ, ಇತರರ ತರಬೇತಿಯಿಂದಲೋ ಎರವಲು ಪಡೆದ ಭಾವನೆಗಳಾಗಿದ್ದರೆ, ಅವುಗಳಲ್ಲಿ ಅಪರೋಕ್ಷ ಅನುಭೂತಿಯ ಗಟ್ಟಿತನ ಇರುತ್ತಿರಲಿಲ್ಲ. 'ಯಾವಾಗ ಧರ್ಮಗ್ಲಾನಿ ಬಂದೊದಗುವುದೋ, ಆಗ ನಾನು ಜನ್ಮವೆತ್ತಿ ಬಂದು ಜಗತ್ತನ್ನು ಗಂಡಾಂತರದಿಂದ ಪಾರುಮಾಡುತ್ತೇನೆ' ಎಂದು ಗೀತೆಯಲ್ಲಿ ಶ್ರೀಕೃಷ್ಣನು ಸಾರಿರುವಂತೆ, ಶ್ರೀರಾಮಕೃಷ್ಣರ ಅವತಾರ ನಿಜಕ್ಕೂ ಅಪಾಯದ ಅಂಚಿನಲ್ಲಿದ್ದ ಭಾರತದ ಆಧ್ಯಾತ್ಮಿಕ ವಾಹಿನಿಯನ್ನು ಸುರಕ್ಷಿತವಾದ ನೆಲೆಗೆ ಕರೆದೊಯ್ದಿತು.

ಶ್ರೀರಾಮಕೃಷ್ಣರ ಭಾವಸಮಾಧಿ, ದೇವದೇವಿಯರನ್ನು ಕುರಿತಾದ ಭಕ್ತಿ, ಭಜನೆ ಇತ್ಯಾದಿಗಳೆಲ್ಲ ಅವರ ಬಾಲ್ಯದಿಂದಲೇ ಆರಂಭವಾಗಿದ್ದವು; ಆದರೆ ಅವರ ಸಾಧನೆ ನಿಜವಾಗಿ ಆರಂಭವಾದುದು ದಕ್ಷಿಣೇಶ್ವರದಲ್ಲೇ ಎನ್ನಬೇಕು. ಆಗಿನ ಕಾಲಕ್ಕೆ ಶಾಕ್ತ ಪರಂಪರೆ ಹಾಗೂ ಇನಿತರ ಸಂಪ್ರದಾಯಗಳೆಲ್ಲ ಮಾತೃದೇವತೆಯ ಆರಾಧನೆಯನ್ನು ತಮ್ಮ ಜೀವನದಲ್ಲಿ ಗಾಢವಾಗಿ ಆಳವಡಿಸಿಕೊಂಡು ಎಷ್ಟೋ ಯುಗಗಳೇ ಸಂದಿದ್ದವು. ಬಂಗಾಳ

ದಲ್ಲಂತೂ ದುರ್ಗಾಪೂಜೆ, ಕಾಳೀಪೂಜೆ, ತಾಂತ್ರಿಕ ಸಾಧನೆ ಇವೆಲ್ಲ ಎಲ್ಲೆಡೆ ಪ್ರಚಲಿತವಾಗಿದ್ದವು. ಇಂತಹ ಪರಿಸರದಲ್ಲಿ ಬೆಳೆದ ಬಾಲಕ ಗದಾಧರನು ಸಹಜವಾಗಿಯೇ ತನ್ನ ಸುತ್ತಮುತ್ತ ಆರಾಧನೆಗೊಳ್ಳುತ್ತಿದ್ದ ಶೀತಲಾ, ದುರ್ಗಾ, ಕಾಳೀ, ಸಿಂಹವಾಹಿನಿ ಮುಂತಾದ ದೇವರನ್ನೂ ಪೂಜಿಸಿದ್ದನು. ಆದರೆ ಜಗನ್ಮಾತೆ ಆತನ ಅಂತರಂಗದ ಇಷ್ಟದೇವತೆಯಾಗಿ ಮಾರ್ಪಟ್ಟುದು ದಕ್ಷಿಣೇಶ್ವರದಲ್ಲಿ ಭವತಾರಿಣಿಯ ಪೂಜೆ ಆರಂಭವಾದ ನಂತರವೇ ಎನ್ನಬೇಕು. ಈ ಘಟನೆ ಅವರ ಆಧ್ಯಾತ್ಮಿಕ ಭಾವನೆಗಳ ದಿಕ್ಕನ್ನೇ ಬದಲಾಯಿಸಿತು.

ಶ್ರೀರಾಮಕೃಷ್ಣರು ಕಾಳೀಮಾತೆಯ ಪೂಜೆಯನ್ನು ಆರಂಭಿಸಿದ್ದು ಕೂಡ ಸಾಧಾರಣ ಅರ್ಚಕನಂತೆ. ಮೊದಮೊದಲಿಗೆ ಕೆಳಜಾತಿಗೆ ಸೇರಿದ ಹೆಂಗಸು ರಾಣಿರಾಸಮಣಿ ಕಟ್ಟಿಸಿದ ದೇಗುಲದಲ್ಲಿ ಪೂಜೆ ಮಾಡಲು ಬಾಲಕ ಗದಾಧರನಿಗೆ ಅಷ್ಟಾಗಿ ಮನಸ್ಸಿರಲಿಲ್ಲ. ಆಗ ಅನಿವಾರ್ಯ ಪರಿಸ್ಥಿತಿಯೇ ಅವರನ್ನು ಅಲ್ಲಿನ ಅರ್ಚಕರಾಗುವಂತೆ ಮಾಡಿತು. ಆರಂಭದಲ್ಲಿ ಸಾಧಾರಣ ಅರ್ಚಕನಂತೆಯೇ ಪೂಜೆ ಆರಂಭಿಸಿದರು ಶ್ರೀರಾಮಕೃಷ್ಣರು. ಅಭಿಷೇಕ, ಅರ್ಚನೆ, ಆವಾಹನೆ, ಧ್ಯಾನ, ಗಂಧ-ಪುಷ್ಪ-ಧೂಪ-ದೀಪಾದಿ ಸೇವೆ, ನೈವೇದ್ಯ, ಪುಷ್ಪಾಂಜಲಿ ಇತ್ಯಾದಿಗಳಿಂದ ಕೂಡಿದ ಪೂಜಾವಿಧಿಯನ್ನು ತನ್ನ ಅಣ್ಣನಿಂದಲೇ ಕಲಿತರು. ಆದರೆ ಮುಂದೆ ಸ್ವತಃ ತಾವೇ ಕಂಡುಕೊಂಡ ಭಾವರೂಪದ ಪೂಜೆ ಶ್ರೀರಾಮಕೃಷ್ಣರ ಅಸಾಧಾರಣ ಪ್ರತಿಭೆ, ವ್ಯಕ್ತಿತ್ವ ಹಾಗೂ ದೈವೀಪ್ರಜ್ಞೆಯ ಹೊಸತನವನ್ನು ಸೂಚಿಸುತ್ತದೆ.

ಕ್ರಮೇಣ ಶ್ರೀರಾಮಕೃಷ್ಣರ ಕಾಳೀಪೂಜೆ ಹೊಸರೂಪವನ್ನು ತಾಳಿತು. ಅದು ಅವರ ಅಂತರಂಗದ ಆಧ್ಯಾತ್ಮಿಕ ಅನ್ವೇಷಣೆಯಾಯಿತು. ಕಾಳಿಯನ್ನು ಜೀವಂತರೂಪದಲ್ಲಿ ಕಾಣಬೇಕು, ಅವಳೊಂದಿಗೆ ಮಾತನಾಡಬೇಕು, ಅವಳು ನಿಜವಾಗಿಯೂ ಇದ್ದುದೇ ಆದರೆ ಅವಳ ದರ್ಶನ ತನಗಾಗಬೇಕು ಎಂಬ ಹಂಬಲ ಅವರಲ್ಲಿ ಮೂಡಿತು. ಈ ಹಂಬಲ ವ್ಯಾಕುಲತೆಯಾಗಿ ಮಾರ್ಪಟ್ಟಿತು; ಹಗಲಿರುಳೂ ಅವರ ಹೃದಯ ಕಾಳಿಯ ದರ್ಶನಕ್ಕಾಗಿ ಹಂಬಲಿಸತೊಡಗಿತು.

ಹೀಗೆ ಅವರ ಸಾಧನೆಯ ಕಥೆ ಆಧ್ಯಾತ್ಮಿಕ ಜೀವನದ ಒಂದು ವಿನೂತನ ಮಾರ್ಗವನ್ನು ತೋರಿಸಿಕೊಡುತ್ತದೆ. ಗ್ರಂಥಗಳಲ್ಲಿ, ಆಚರಣೆಗಳಲ್ಲಿ, ದೇವಾಲಯಗಳಲ್ಲಿ ಸಾಮಾನ್ಯವಾಗಿ ನಡೆಯುವ ಪೂಜೆ-ಪುನಸ್ಕಾರಗಳಲ್ಲಿ ಹಿಂದಿನ ಸಂಪ್ರದಾಯದ ಅನುಸರಣೆ, ಶಾಸ್ತ್ರೋಕ್ತ ವಿಧಿನಿಯಮಗಳ ಪಾಲನೆಯಷ್ಟೇ ಕಂಡುಬರುತ್ತದೆ; ಅಲ್ಲಿ ಅದು ಅಂತರಂಗದ ಅನ್ವೇಷಣೆಯಲ್ಲ. ಆದರೆ ಶ್ರೀರಾಮಕೃಷ್ಣರು ಈ ಬಗೆಯ ಸಾಂಪ್ರದಾಯಿಕ ಪೂಜಾಪದ್ಧತಿಯ ನಡುವೆಯೇ ತಮ್ಮ ಅಂತರಂಗದ ಅನ್ವೇಷಣೆಯನ್ನು ಆರಂಭಿಸಿದರು. ಕಲ್ಲಿನ ದೇವತೆ ಜಡವಸ್ತುವಲ್ಲ; ಆಕೆ ಜೀವಂತ 'ಕಾಳಿ'; ತಮ್ಮ ಅಂತರಂಗದಲ್ಲಿರುವ ದಿವ್ಯಮೂರ್ತಿಯೂ ಅವಳೆ. ಆಕೆ ಎಲ್ಲೆಡೆ ವ್ಯಾಪಿಸಿರುವ ಜೀವಂತಮೂರ್ತಿಯಾಗಿದ್ದರೆ, ತಾನು ಅವಳನ್ನೇಕೆ ಕಾಣಬಾರದು? ಈ ಬಗೆಯ ಭಾವಪೂರ್ಣ ವ್ಯಾಕುಲತೆ ಅವರ ಅಂತರಂಗವನ್ನೆಲ್ಲ ವ್ಯಾಪಿಸಿತು. ತಾವು ಮಾಡುತ್ತಿದ್ದ ಪೂಜೆ, ಜಪ, ಧ್ಯಾನ ಎಲ್ಲವೂ ಇಂತಹ ಭಾವಪೂರ್ಣ ನಿವೇದನೆ, ಪ್ರಾರ್ಥನೆಯಾಗಿ ಮಾರ್ಪಟ್ಟಿತು. ಮಗುವಿನ ಮುಗ್ಧತೆ, ಸಾಧಕನ ಪರಿಶುದ್ಧ ಭಾವ, ಅನನ್ಯ ಭಕ್ತಿಯ ಸರಳತೆ ಅವರನ್ನು 'ಜಗನ್ಮಾತೆಯ ಶಿಶು'ವನ್ನಾಗಿಸಿತು. ಅವರೇ ಹೇಳುವಂತೆ, ಮಾತೃಭಾವದ ಆರಾಧನೆ ಅತ್ಯಂತ ಸಹಜವಾದ ಹಾಗೂ ಪರಿಶುದ್ಧವಾದ ಭಾವ. ಅದನ್ನು ಅವಲಂಬಿಸಿಕೊಂಡೇ ಅವರು ಸಾಧನೆಯ ತುತ್ತತುದಿಗೇರಿದರು; ಸಾಕ್ಷಾತ್ಕಾರದ ಸಿದ್ಧಿಯನ್ನು ಹೊಂದಿದರು.

## ವಿವಿಧ ಮಾತೆಯರ ದರ್ಶನ

'ಏಕತೆಯಲ್ಲಿ ಅನೇಕತೆ' ಎಂಬುದು ಹಿಂದೂಸಂಸ್ಕೃತಿಯ ಒಂದು ವಿಶೇಷತೆ. ಅದನ್ನು ವಿವರಿಸುತ್ತ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಜೀವನದ ಪ್ರತಿಯೊಂದು ಕ್ಷೇತ್ರಗಳಲ್ಲೂ ಈ ವೈವಿಧ್ಯತೆ ಹಾಗೂ ಅದರ ಹಿಂದಿರುವ ಏಕತೆಯನ್ನು ನಾವು ಗಮನಿಸಬಹುದು. ಶ್ರೀರಾಮಕೃಷ್ಣರ ತತ್ತ್ವ, ದರ್ಶನ ಹಾಗೂ ಅನುಭವಗಳಲ್ಲಿ ನಾವು ಈ ವಿಶಿಷ್ಟತೆಯನ್ನೇ ಕಾಣುತ್ತೇವೆ. ಅವರು ಎಲ್ಲ ದೇವದೇವಿಯರ ದರ್ಶನವನ್ನೂ ಹೊಂದಿದರು, ಅದಕ್ಕಾಗಿ ಆಯಾ ಪದ್ಧತಿಗಳಿಗೆ ಅನುಸಾರವಾಗಿಯೇ ಸಾಧನೆ ಮಾಡಿದರು. ಆದರೆ, ಅಂತಿಮವಾಗಿ ಎಲ್ಲ ದೇವತೆಗಳೂ, ಎಲ್ಲ ತತ್ತ್ವಗಳೂ ಒಂದೇ ಸತ್ಯದ ವಿವಿಧ ಮುಖಗಳು ಎಂಬುದನ್ನು ಅವರು ಕಂಡುಕೊಂಡರು. ಶ್ರೀರಾಮಕೃಷ್ಣರು ಭಗವಂತನ್ನು ತಾಯಿಯಾಗಿ ಕಂಡಾಗಲೂ ಕೂಡ ಇದೇ ಏಕತೆಯ ದರ್ಶನ ಅವರಲ್ಲಿ ಉಂಟಾಗಿದುದ್ದನ್ನು ನಾವು ಗಮನಿಸಬಹುದು. ಸಾಮಾನ್ಯವಾಗಿ ಅವರು 'ಜಗನ್ಮಾತೆ', 'ತಾಯಿ' ಎಂದು ಹೇಳುವಾಗಲೆಲ್ಲ ತಮ್ಮ ಇಷ್ಟದೇವತೆಯಾದ ಕಾಳಿಯನ್ನು ಕುರಿತಾಗಿಯೇ ಹೇಳುತ್ತಿದ್ದರು; ಆದರೆ ಸಾಂದರ್ಭಿಕವಾಗಿ ಅವರು ದುರ್ಗೆ, ಸರಸ್ವತಿ, ಲಕ್ಷ್ಮಿ, ಪಾರ್ವತಿ ಇವರನ್ನು ಕುರಿತಾಗಿಯೂ ಹೇಳುತ್ತಿದ್ದುದುಂಟು. ಆದರೆ ಈ ದೇವತೆಗಳೆಲ್ಲಾ ಕೇವಲ ಪುರಾಣದ ಕಥೆಗಳ ದೇವತೆಗಳಷ್ಟೇ ಆಗಿರದೆ, ಅವರಿಗೆ ವಿವಿಧ ಸಂದರ್ಭಗಳಲ್ಲಿ ದರ್ಶನ ನೀಡಿ ಅನುಗ್ರಹಿಸಿದ ಜೀವಂತಮೂರ್ತಿಗಳಾಗಿದ್ದರು ಎಂಬುದು ಗಮನಾರ್ಹ ಸಂಗತಿ. ಇದೇ ರೀತಿ ಸೀತೆಯ ದರ್ಶನ, ರಾಧೆಯ ದರ್ಶನ, ಶ್ರೀರಾಜರಾಜೇಶ್ವರಿಯ ದರ್ಶನಗಳಾದ ನಂತರ, ಶ್ರೀರಾಮಕೃಷ್ಣರು ಈ ಮೂರ್ತಿಗಳು ತಮ್ಮಲ್ಲೇ ವಿಲೀನವಾಗಿಬಿಟ್ಟವು ಎನ್ನುತ್ತಾರೆ.

ವೇದಾಂತದ ಬ್ರಹ್ಮ ಹಾಗೂ ಮಾಯೆ; ಸಾಂಖ್ಯರ ಪುರುಷ ಹಾಗೂ ಪ್ರಕೃತಿ; ಶಾಕ್ತರ ಶಿವ ಹಾಗೂ ಶಕ್ತಿ — ಈ ತತ್ತ್ವಗಳು ಶ್ರೀರಾಮಕೃಷ್ಣರ ಮಾತೃ ಆರಾಧನೆಯ ಹಿನ್ನೆಲೆಯಲ್ಲಿದ್ದುದು ಕಂಡುಬರುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಾರೆ: ''ನಾವು ಏನನ್ನು

ನೋಡುತ್ತೇವೋ, ಭಾವಿಸುತ್ತೇವೋ ಅವೆಲ್ಲಾ ಆದ್ಯಾ ಶಕ್ತಿಯೇ, ಚಿಚ್ಛಕ್ತಿಯ ಅಭಿವ್ಯಕ್ತಿಯೇ. ಸೃಷ್ಟಿ, ಪಾಲನೆ, ಸಂಹಾರ, ಜೀವ ಜಗತ್ತು, ಧ್ಯಾನ, ಧ್ಯಾತೃ, ಭಕ್ತಿ, ಪ್ರೇಮ ಎಲ್ಲಾ ಆಕೆಯ ಐಶ್ವರ್ಯ... ಆದರೆ ಬ್ರಹ್ಮನಿಗೂ ಶಕ್ತಿಗೂ ಅಭೇದ... ಬ್ರಹ್ಮಶಕ್ತಿ ಹಾವಿನ ಸೊಟ್ಟ ಸೊಟ್ಟ ಗತಿ ಇದ್ದ ಹಾಗೆ. ಹಾವನ್ನು ಭಾವಿಸಿದರೆ ಆದರ ಸೊಟ್ಟ ಸೊಟ್ಟ ಗತಿಯನ್ನೂ ಭಾವಿಸಲೇಬೇಕಾಗುತ್ತದೆ. ಹಾವಿನ ಸೊಟ್ಟ ಸೊಟ್ಟ ಗತಿಯನ್ನು ಭಾವಿಸಿದರೆ, ಅದರೊಡನೆ ಹಾವನ್ನೂ ಭಾವಿಸಲೇಬೇಕಾಗುತ್ತದೆ. ಹಾಲಿನ ಬಿಳಿ ಬಣ್ಣವನ್ನು ಭಾವಿಸಿದರೆ ಅದರೊಡನೆ ಹಾಲನ್ನೂ ಭಾವಿಸಲೇಬೇಕಾಗುತ್ತದೆ. ನೀರನ್ನು ಭಾವಿಸಿದರೆ, ಅದರೊಡನೆ ಅದರ ತೊಯ್ಯುವ ಶಕ್ತಿಯನ್ನೂ ಭಾವಿಸಲೇಬೇಕಾಗುತ್ತದೆ. ನೀರಿನ ತೋಯ್ಯುವ ಶಕ್ತಿಯನ್ನು ಭಾವಿಸದರೆ, ಅದರೊಡನೆ ನೀರನ್ನೂ ಭಾವಿಸಲೇಬೇಕಾಗುತ್ತದೆ.

''ಈ ಆದ್ಯಾಶಕ್ತಿ, ಎಂದರೆ ಮಹಾಮಾಯೆ ಬ್ರಹ್ಮನನ್ನು ಮುಚ್ಚಿಬಿಟ್ಟಿದೆ. ಈ ಆವರಣ ಹೋದ ಒಡನೇ ಅನುಭವವಾಗುತ್ತದೆ 'ಏನಾಗಿದ್ದೆನೋ ಅದೇ ಆಗಿದ್ದೇನೆ,' 'ನಾನೇ ನೀನು; ನೀನೇ ನಾನು' ಅಂತ.'' *('ಶ್ರೀರಾಮಕೃಷ್ಣ ವಚನವೇದ', ಸಂಪುಟ ೧, ಪು. ೨೨೨-೨೩)*

## ಶ್ರೀಮಾತೆಯವರಲ್ಲಿ ಮಾತೃದೇವತೆ

ಭಾರತದ ಅಂತಃಸತ್ವವನ್ನು ಆಧ್ಯಾತ್ಮಿಕ ಸಾಕ್ಷಾತ್ಕಾರದ ಮೂಲಕ ಶ್ರೀರಾಮಕೃಷ್ಣರು ಹೇಗೆ ಜಾಗೃತಗೊಳಿಸಿದರೋ, ಅದೇ ರೀತಿ ಸಮಸ್ತ ನಾರಿಯರಲ್ಲಿ ಅಂತರ್ಭೂತವಾಗಿರುವ ಮಾತೃದೇವತೆಯನ್ನು ಶ್ರೀಮಾತೆಯವರ ಮೂಲಕ ಅವರು ಜಾಗೃತಗೊಳಿಸಿದರು ಎನ್ನಬೇಕು. ಫಲಹಾರಿಣೀ ಕಾಳಿಯ ಪೂಜೆಯ ದಿನದಂದು ಅವರು ಶ್ರೀಮಾತೆಯವರನ್ನು 'ಷೋಡಶಿ'ಯಾಗಿ ಪೂಜಿಸುವ ಮೂಲಕ, ಅವರ ಅಂತರಂಗದಲ್ಲಿ ಅಡಗಿದ್ದ ಭಗವಂತನ ಮಾತೃಭಾವವನ್ನು ಜಾಗೃತಗೊಳಿಸಿದರು. ಸಮಾಧಿಯ ಅವಸ್ಥೆಯಲ್ಲಿ ಶ್ರೀರಾಮಕೃಷ್ಣರು ಪರಬ್ರಹ್ಮನಲ್ಲಿ ಐಕ್ಯರಾದಂತೆ, ಶ್ರೀಮಾತೆಯವರು ಸಮಸ್ತ ಸೃಷ್ಟಿಯ ಮಾತೆಯಾದ ಶಕ್ತಿಯನ್ನು ತನ್ನಲ್ಲೇ ಕಂಡುಕೊಂಡರು. ಪರಮಾತ್ಮನ ಅವತಾರವಾದ ಶ್ರೀರಾಮಕೃಷ್ಣರ ಲೀಲಾಸಹಾಯಕಿಯಾಗಿ ತಾನೂ ಅವರೊಂದಿಗೆ ಧರೆಗಿಳಿದು ಬಂದ ಶಕ್ತಿಸ್ವರೂಪಿಣಿ ಎಂಬುದು ಅವರ ಅಂತರಂಗದ ಬೋಧೆಯಾಯಿತು. ಯುಗಯುಗದಲ್ಲೂ ಧರೆಗೆ ಅವತರಿಸಿ ಬಂದ ಭಗವಂತನ ವಿವಿಧ ರೂಪಗಳಲ್ಲಿ, ಹೇಗೆ ವಿಷ್ಣುವಿಗೆ ಲಕ್ಷ್ಮಿಯಾಗಿ, ಕೃಷ್ಣನಿಗೆ ರಾಧೆಯಾಗಿ, ರಾಮನಿಗೆ ಸೀತೆಯಾಗಿ, ಶಿವನಿಗೆ ಪಾರ್ವತಿಯಾಗಿ, ಶ್ರೀಚೈತನ್ಯರಿಗೆ ವಿಷ್ಣುಪ್ರಿಯೆಯಾಗಿ ಜಗನ್ಮಾತೆಯು ಅವತರಿಸಿದಳೋ, ಅಂತೆಯೇ ಶ್ರೀರಾಮಕೃಷ್ಣರ ಈ ಅವತರಣದಲ್ಲಿ ಶ್ರೀಮಾತೆಯವರು 'ಶಾರದೆ'ಯಾಗಿ ಅವತರಿಸಿ ಬಂದಿದ್ದಾರೆ.

ಶ್ರೀರಾಮಕೃಷ್ಣರ ಕಾರ್ಯವನ್ನು ಶ್ರೀಮಾತೆಯವರು ಮುಂದುವರೆಸಿದರು; ಶಿಷ್ಯಂದಿರ, ಭಕ್ತರ ಮೂಲಕ ಪ್ರಪಂಚದ ಎಲ್ಲೆಡೆ ಆಧ್ಯಾತ್ಮಿಕ ಭಾವವನ್ನು ಹರಡುವ ಮೂಲಕ ಅವರು ಜಗತ್ತಿನ ಆಧ್ಯಾತ್ಮಿಕ ಮಾತೆಯಾಗಿ ಪರಿಗಣಿಸಲ್ಪಟ್ಟರು. ಭಗವಂತನ ಮಾತೃತ್ವದ ಕೊನೆಯ ಮಾತು ಶ್ರೀಮಾತೆ ಶಾರದಾದೇವಿಯವರು ಎನ್ನುತ್ತಾರೆ. ಜಗನ್ಮಾತೆಯ ದಿವ್ಯ ಗುಣಗಳಾದ ಅಲೌಕಿಕತೆ, ಆಧ್ಯಾತ್ಮಿಕತೆ, ವಿಶ್ವವಿಶಾಲ ಪ್ರೇಮ, ಅತ್ಯಂತ ಪರಿಶುದ್ಧವಾದ ಭಕ್ತಿ, ಅನಂತ ಸಹನೆ-ತಾಳ್ಮೆ, ಎಲ್ಲರನ್ನೂ ಸಲಹುವ ಮಾತೃಪ್ರೇಮ — ಇವೆಲ್ಲವೂ ಶ್ರೀಮಾತೆಯವರಲ್ಲಿ ಮಡುಗಟ್ಟಿದ್ದವು.

ಶ್ರೀಮಾತೆಯವರು ಎಲ್ಲ ದೇವದೇವತೆಗಳನ್ನೂ ಪೂಜಿಸಿದರೂ, ಕೆಲವು ಸಂದರ್ಭಗಳಲ್ಲಿ ಕಾಳಿ, ದುರ್ಗೆ, ರಾಧೆ, ಸೀತೆ, ಲಕ್ಷ್ಮಿ, ಪಾರ್ವತಿ ಮುಂತಾದ ಸ್ತ್ರೀದೇವತೆಗಳೊಂದಿಗೆ ತಮ್ಮನ್ನು ತಾವು ಸಮೀಕರಿಸಿಕೊಂಡದ್ದಿದೆ. ಅವರ ಆತ್ಮೀಯ ಭಕ್ತರು ಹಾಗೂ ಶಿಷ್ಯಂದಿರು ಅವರಲ್ಲೇ ಎಲ್ಲ ದೇವದೇವತೆಗಳನ್ನು ಕಂಡರು. (ಕೇವಲ ಭಾವನಾತ್ಮಕವಾಗಿ ಮಾತ್ರವಲ್ಲ; ಅನೇಕ ಬಾರಿ ಯಥಾರ್ಥವಾಗಿ ಕಂಡರು, ಕೆಲವು ಬಾರಿ ದರ್ಶನದಲ್ಲೂ ಕಂಡರು.) ಆದರೆ ಶ್ರೀಮಾತೆ ಎಂದಿಗೂ ತಮ್ಮ ದೈವತ್ವವನ್ನು ಎಲ್ಲರೆದುರು ಪ್ರಕಟಪಡಿಸದೆ, ಯಾವಾಗಲೂ ತಮ್ಮಲ್ಲೇ ಅದನ್ನು ಅಡಗಿಸಿಟ್ಟುಕೊಂಡರು. ಸಂದರ್ಭ ಬಂದಾಗಲೆಲ್ಲ 'ಎಲ್ಲವೂ ಶ್ರೀರಾಮಕೃಷ್ಣರೇ; ಅವರನ್ನೇ ಪ್ರಾರ್ಥಿಸು; ಅವರು ಎಲ್ಲವನ್ನೂ ನೋಡಿಕೊಳ್ಳುತ್ತಾರೆ' ಎನ್ನುತ್ತಿದ್ದರು.

ಶ್ರೀರಾಮಕೃಷ್ಣರ ಮೂಲಕ ಭಾರತದಲ್ಲಿ ಮಾತೃ ಆರಾಧನೆಯ ಪುನರುಜ್ಜೀವನವಾಯಿತು ಎನ್ನಬೇಕು. ಮೊದಲಿಗೆ ಸ್ವಾಮಿ ವಿವೇಕಾನಂದರು ಕಾಳಿಯನ್ನು ಒಪ್ಪುತ್ತಿರಲಿಲ್ಲ. ''ಶ್ರೀರಾಮಕೃಷ್ಣರು ನನ್ನನ್ನು ಕಾಳಿಗೆ ಒಪ್ಪಿಸಿಬಿಟ್ಟರು. ಬಹಳ ಕಾಲ ಹೋರಾಟ ಮಾಡಿದ ನಂತರ ನಾನು ಕಾಳಿಯನ್ನು ಒಪ್ಪಿಕೊಂಡೆ'' ಎಂದು ಸ್ವಾಮೀಜಿಯವರೇ ಹೇಳಿಕೊಂಡಿದ್ದಾರೆ. ಇದೇ ರೀತಿ, ತಾತ್ತ್ವಿಕವಾಗಿ, ಆಧ್ಯಾತ್ಮಿಕವಾಗಿ ಅಥವಾ ಪರಂಪರಾಗತವಾಗಿ ಮಾತೃ ಆರಾಧನೆಯ ಪದ್ಧತಿಯನ್ನು ಅನುಸರಿಸದವರೂ ಕೂಡ ಶ್ರೀರಾಮಕೃಷ್ಣರ ಜೀವನ, ಉಪದೇಶಗಳ ಮೂಲಕ ಜಗನ್ಮಾತೆಯನ್ನು ತಮ್ಮ ಆರಾಧ್ಯಮೂರ್ತಿಯನ್ನಾಗಿಸಿಕೊಂಡಿದ್ದಾರೆ. ಇದು ಶ್ರೀರಾಮಕೃಷ್ಣರ ಮಹಾ ಆಧ್ಯಾತ್ಮಿಕ ಶಕ್ತಿಯ ಪ್ರತೀಕವಾಗಿದೆ.

### ಅಕ್ಟೋಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೨ | ಶನಿವಾರ | ಏಕಾದಶಿ |
| ೬ | ಬುಧವಾರ | ಸ್ವಾಮಿ ಅಖಂಡಾನಂದ ಜಯಂತಿ |
| ೧೨ | ಮಂಗಳವಾರ | ಮಹಾ ಸಪ್ತಮಿ |
| ೧೩ | ಬುಧವಾರ | ಮಹಾ ಅಷ್ಟಮಿ |
| ೧೪ | ಗುರುವಾರ | ಮಹಾ ನವಮಿ |
| ೧೫ | ಶುಕ್ರವಾರ | ಮಹಾ ನವಮಿ, ಮಧ್ವ ಜಯಂತಿ |
| ೧೬ | ಶನಿವಾರ | ಏಕಾದಶಿ |